




# ಗೋವಾ ಇತಿಹಾಸಕ್ಕೆ 'ಬಿಗ್ ಫುಟ್' ಕನ್ನಡಿ

**ಗೋವಾದ ಐತಿಹಾಸಿಕ ಮಹತ್ವವನ್ನು ಅರಿಯಲು 'ಬಿಗ್ ಫುಟ್' ಬಯಲು ಮ್ಯೂಸಿಯಂ ಸಹಕಾರಿ. ಪೋರ್ಚುಗೀಸರು ಆಗಮಿಸುವುದಕ್ಕೆ ಮೊದಲಿನ ಗೋವೆ ಅಲ್ಲಿ ಅನಾವರಣಗೊಂಡಿದೆ.**

■ ಗೌರಿ ಚಂದ್ರಕೇಸರಿ

ಪ್ರತಿ ಭೇಟಿಯಲ್ಲೂ ಹೊಸತಾಗಿ ಕಾಣಿಸುವ ಆಕರ್ಷಣೆಯನ್ನು ಹೊಂದಿರುವ ಭಾರತದ ಪ್ರವಾಸಿ ತಾಣಗಳಲ್ಲಿ ಗೋವಾ ಪ್ರಮುಖವಾದುದು. ಅಲ್ಲಿನ ಸಮುದ್ರ, ಬೀಚ್‌ಗಳು, ಜಲಪಾತ, ಹಿನ್ನೀರು – ಇವುಗಳ ಸೊಬಗು ಒಂದೆಡೆಯಾದರೆ, ದೇವಾಲಯ, ಚರ್ಚು, ಕೋಟೆಗಳದ್ದು ಮತ್ತೊಂದು ಬಗೆಯ ಸೆಳೆತ. ಗೋವಾದ ಮತ್ತೊಂದು ಆಕರ್ಷಣೆ, ನಗರದ ಹೊರಭಾಗದಲ್ಲಿರುವ 'ಬಿಗ್ ಫುಟ್' ಎಂಬ ಬಯಲು ಸಂಗ್ರಹಾಲಯ.

'ಬಿಗ್ ಫುಟ್'ಗೆ ಸಾಗುವ ದಾರಿಯುದ್ದಕ್ಕೂ ಹೃನ್ಮನಗಳಿಗೆ ತಂಪನ್ನೀಯುವ ಹಸಿರ ಹೊದ್ದ ಕಾಡು, ಹೊಲ–ಗದ್ದೆಗಳು ಕಾಣಿಸುತ್ತವೆ. ತಂಪನ್ನು ಹೊಂದಿದ ಗಾಳಿ ದಣಿವನ್ನು ಮರೆಸುತ್ತದೆ.

ದಕ್ಷಿಣ ಗೋವಾದಲ್ಲಿರುವ 'ಬಿಗ್ ಫುಟ್' ಮ್ಯೂಸಿಯಂ ಮಾರ್ಗೋವಾ ರೈಲು ನಿಲ್ದಾಣದಿಂದ 9 ಕಿ.ಮೀ. ದೂರದಲ್ಲಿದೆ. ಲೌಟೋಲಿಮ್ ಎಂಬ ಸುಂದರ ಗ್ರಾಮದಲ್ಲಿರುವ ಈ ಮ್ಯೂಸಿಯಂ ಒಂಬತ್ತು ಎಕರೆಗಳಷ್ಟು ವಿಸ್ತಾರವಾದ ಪ್ಲಾಂಟೇಷನ್ ಒಂದರಲ್ಲಿದೆ. ಮುಖ್ಯ ದ್ವಾರವನ್ನು ಪ್ರವೇಶಿಸಿದಾಗ ಹಳೆಯ ಗೋವೆಯ ಸೊಗಡನ್ನು ಹೊಂದಿದ ಕಟ್ಟಡಗಳು ನಮ್ಮನ್ನು ಸ್ವಾಗತಿಸುತ್ತವೆ. ಸಂಗ್ರಹಾಲಯದ ಮೊದಲ ಕೋಣೆಯನ್ನು ಪ್ರವೇಶಿಸಿದಾಗ ಹಿಂದಿನ ಕಾಲದಲ್ಲಿ ಗೋವೆಯ ಶ್ರೀಮಂತ ವರ್ಗದವರು ಬಳಸುತ್ತಿದ್ದ ಮೇಣೆ, ಕುರ್ಚಿ ಹಾಗೂ ಗಾಳಿ ಬೀಸಲು ಸೀಲಿಂಗ್‌ನಲ್ಲಿ ಕಟ್ಟಿದ ಬಟ್ಟೆಯ ಬೀಸಣಿಕೆ ಕಾಣುತ್ತವೆ. ಪ್ರಾಚೀನ ಭಾವಚಿತ್ರಗಳು, ಪೇಂಟಿಂಗ್ಸ್‌ಗಳನ್ನು ಮ್ಯೂಸಿಯಂನಲ್ಲಿ ಕಾಣಬಹುದು.

ಒಳಾಂಗಣದಿಂದ ಹೊರಗೆ ಬಂದರೆ ಬಯಲು ಮ್ಯೂಸಿಯಂ ತೆರೆದುಕೊಳ್ಳುತ್ತದೆ. ನಾನಾ ವಿಧದ ಮಸಾಲೆ ಪದಾರ್ಥಗಳ ಗಿಡಮರಗಳು ಹಾಗೂ ಔಷಧಿಯುಕ್ತ ಗಿಡಮೂಲಿಕೆಗಳನ್ನು ಅಲ್ಲಿ ಬೆಳೆಸಿ ಪೋಷಿಸಲಾಗಿದೆ. ಹಣ್ಣಿನ ಮರಗಳೂ ಇವೆ. ಬಗೆ ಬಗೆಯ ಕ್ಯಾಕ್ಟಸ್‌ಗಳು, ರಬ್ಬರ್, ಕೋಕಂ, ಗೋಡಂಬಿ ಪ್ಲಾಂಟೇಷನ್‌ಗಳು ನಳನಳಿಸುತ್ತಿವೆ. ಅವುಗಳ ಮಧ್ಯದಲ್ಲಿ ಗೋವಾದ ಐತಿಹಾಸಿಕ ವಿಕಾಸವನ್ನು ಬಿಂಬಿಸುವ, ಚರಿತ್ರೆಯನ್ನು ಹೇಳುವ ಪ್ರತಿಮೆಗಳು ನಮ್ಮನ್ನು ಸ್ವಾಗತಿಸುತ್ತವೆ.

ಗೋವೆಯ ಮುಖ್ಯ ಉದ್ಯೋಗವಾದ ಮೀನುಗಾರಿಕೆ, ಅಂದಿನ ಕಾಲದ ಮಡಿಕೆ ತಯಾರಿಕೆ, ಕ್ಷೌರಿಕ, ಚಮ್ಮಾರ, ಬಳೆಗಾರ, ಮಿಠಾಯಿ ಅಂಗಡಿಗಳು, ಉಪ್ಪು ತಯಾರಿಕೆ, ಆಟವಾಡುತ್ತಿರುವ ಮಕ್ಕಳು – ಹೀಗೆ ಜನಜೀವನ ವೈವಿಧ್ಯವನ್ನು ಸಾರುವ ಮಣ್ಣಿನ ಪ್ರತಿಮೆಗಳು ಕಾಣುತ್ತವೆ. ಈ ಪ್ರತಿಮೆಗಳು ಚೆಲುವಾಗಿರುವುದಷ್ಟೇ ಅಲ್ಲ, ಅತ್ಯಂತ ನೈಜವಾಗಿಯೂ ಇವೆ. ಹಿಂದೂ ಹಾಗೂ ಕ್ರಿಶ್ಚಿಯನ್ ಧರ್ಮೀಯರು ಹೇಗೆ ಸೌಹಾರ್ದ ಜೀವನವನ್ನು ನಡೆಸುತ್ತಿದ್ದರು ಎನ್ನುವುದನ್ನು ಸೂಚಿಸುವ ಸಾಂಸ್ಕೃತಿಕ ಬಿಂಬಗಳನ್ನು ಅಲ್ಲಿ ಕಣ್ತುಂಬಿಕೊಳ್ಳಬಹುದು. ಧ್ವನಿಮುದ್ರಿಕೆಗಳ ಮೂಲಕ ಪ್ರವಾಸಿಗರಿಗೆ ಚರಿತ್ರೆಯ ತುಣುಕುಗಳನ್ನು ದಾಟಿಸುವ ಪ್ರಯತ್ನ ಪರಿಣಾಮಕಾರಿಯಾಗಿದೆ.

ಅಂದಿನ ಗೋವನ್ನರು ವಾಸಿಸುತ್ತಿದ್ದ ಮನೆ, ಗುಡಿಸಲು, ದೇವಸ್ಥಾನ, ಚರ್ಚುಗಳ ಮಾದರಿಗಳು ಬಯಲು ಸಂಗ್ರಹಾಲಯದಲ್ಲಿವೆ. ಹಲವಾರು ದೇಶಗಳಿಂದ ಸಂಗ್ರಹಿಸಲಾದ 1458 ಶಿಲುಬೆಗಳ ಮಾದರಿಗಳು ನೋಡುಗರ ಗಮನಸೆಳೆಯುತ್ತವೆ.

ಗ್ರೀಕ್–ರೋಮನ್ ಶೈಲಿಯಲ್ಲಿ, ಮಾಯೇಂದ್ರಾ ಆಲ್ವಾರ್ಸ್ ಎಂಬ ಶಿಲ್ಪಿ ಕೆತ್ತಿದ ಮೀರಾಬಾಯಿಯ ಶಿಲ್ಪ ಉದ್ಯಾನದ ಆಕರ್ಷಣೆಗಳಲ್ಲೊಂದು. 14 ಮೀಟರ್ ಉದ್ದ ಹಾಗೂ 5 ಮೀಟರ್ ಅಗಲ ಇರುವ ಆ ಶಿಲ್ಪವು ಭಾರತದ ಅತೀ ಉದ್ದನೆಯ ಏಕ ಶಿಲ್ಪ ಎನ್ನಲಾಗಿದ್ದು, 'ಲಿಮ್ಕಾ ಬುಕ್ ಆಫ್ ರೆಕಾರ್ಡ್'ನಲ್ಲಿ ಸ್ಥಾನ ಪಡೆದಿದೆ. ಏಕತಾರಿಯನ್ನು ಮೀಟುತ್ತ ಕೃಷ್ಣನ ಧ್ಯಾನದಲ್ಲಿ ಮೈಮರೆತಿರುವ ಮೀರಾಬಾಯಿಯ ಆ ಶಿಲ್ಪವನ್ನು ಮೂವತ್ತು ದಿನಗಳಲ್ಲಿ ಕೆತ್ತಲಾಗಿದೆಯಂತೆ.

'ಬಿಗ್ ಫುಟ್' ಎಂಬ ಹೆಸರಿನ ಹಿನ್ನೆಲೆಯಲ್ಲಿ ಒಂದು ಕಥೆಯಿದೆ. ಧನಿಕನೂ ಗುಣವಂತನೂ ಆಗಿದ್ದ ಮಹಾಧರ ಎಂಬ ವ್ಯಕ್ತಿ ವಂಚನೆಗೊಳಗಾಗಿ ನಿರ್ಗತಿಕನಾಗುತ್ತಾನೆ. ಆದರೆ, ಅವನ ಭಕ್ತಿಗೆ ಮೆಚ್ಚಿದ ದೇವರು 'ಬೇಕಾದ ವರವನ್ನು ಕೇಳಿಕೋ' ಎಂದಾಗ, ಮಹಾಧರ ತಪಸ್ಸು ಮಾಡಲು ಜಾಗವನ್ನು ಕೇಳುತ್ತಾನೆ. ಆಗ ದೇವರು ಉರಿಯುತ್ತಿರುವ ಬಂಡೆಗಲ್ಲನ್ನು ಕರುಣಿಸುತ್ತಾನೆ. ಒಂಟಿ ಕಾಲಿನಲ್ಲಿ ಉರಿಯುವ ಬಂಡೆಯ ಮೇಲೆ ನಿಂತು ಮಹಾಧರ ತಪಸ್ಸು ಮಾಡಿ ಮೋಕ್ಷವನ್ನು ಹೊಂದುತ್ತಾನೆ. ಹೀಗೆ ತಪಗೈದ ಆ ಬಂಡೆಗಲ್ಲಿನ ಮೇಲೆ ಮಹಾಧರನ ಪಾದದ ಗುರುತು ಇದೆ. ಆ ಬಂಡೆಯನ್ನು ಇಲ್ಲಿ ನಿತ್ಯವೂ ಪೂಜಿಸುತ್ತಾರೆ.

'ಬಿಗ್ ಫುಟ್' ಮ್ಯೂಸಿಯಂನಲ್ಲಿ ಒಂದು ಸುತ್ತು ಬಂದರೆ ಪೋರ್ಚುಗೀಸರು ಕಾಲಿಡುವ ಮುನ್ನ ಗೋವಾ ಹೇಗಿತ್ತು ಎಂಬುದು ತಿಳಿಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in